ಎಲ್ಲೆಲ್ಲೂ ಶಿವನಾಮ ಸ್ಮರಣೆ, ಜಾಗರಣೆ

ಸಂಭ್ರಮದಿಂದ ಶಿವರಾತ್ರಿ ಆಚರಣೆ | ಸಿದ್ಧಾರೂಢರ ಮಠ ಸೇರಿ ದೇವಸ್ಥಾನಗಳಲ್ಲಿ ಸಾವಿರಾರು ಭಕ್ತರಿಂದ ದರ್ಶನ

ಹುಬ್ಬಳ್ಳಿಯ ಜಿಮಖಾನಾ ಮೈದಾನದಲ್ಲಿ ಬುಧವಾರ ಕಾಶಿ ವಿಶ್ವನಾಥ ಮಂದಿರದ ಮಾದರಿಯಲ್ಲಿ ಶಿವಲಿಂಗಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ವಿಶೇಷ ಪೂಜೆ ಸಲ್ಲಿಸಿದರು.

ಹುಬ್ಬಳ್ಳಿಯ ಈಶ್ವರ ನಗರದಲ್ಲಿರುವ ವಿಶ್ವನಾಥ ಮಂದಿರದಲ್ಲಿ ಸಂಸದ ಜಗದೀಶ ಶೆಟ್ಟರ ಕುಟುಂಬ ಸಮೇತರಾಗಿ ಪಾಲ್ಗೊಂಡು ಅಭಿಷೇಕ ನೆರವೇರಿಸಿದರು.

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಶಿವರಾತ್ರಿ ಹಿನ್ನೆಲೆಯಲ್ಲಿ ಬುಧ್ವವಾರದಂದು ನಗರಾದ್ಯಂತ ಶಿವನಾಮ ಸ್ಮರಣೆ ಮೇಳೈಸಿತ್ತು. ಭಕ್ತರು ಶ್ರದ್ಧಾ- ಭಕ್ತಿಯಿಂದ ಮಹಾ ಶಿವರಾತ್ರಿ ಆಚರಣೆ ಮಾಡಿದರು. ಎಲ್ಲ ದೇವಸ್ಥಾನಗಳು ಭಕ್ತರಿಂದ ತುಂಬಿ ತುಳುಕುತ್ತಿದ್ದವು. ಬೆಳಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತು ಭಕ್ತರು ದೇವರ ದರ್ಶನ ಪಡೆದರು.

ಬಹುತೇಕ ದೇವಸ್ಥಾನಗಳು, ಮಠದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ, ಅಭಿಷೇಕ ನಡೆದರೆ, ಮಹಿಳಾ ಮತ್ತು ಪುರುಷ ಭಜನಾ ಮಂಡಳಿಯಿಂದ ಸಂಜೆ ಶಿವನಾಮ ಸ್ಮರಣೆ, ವಿಶೇಷ ಭಜನಾ ಕಾರ್ಯಕ್ರಮ ಹಾಗೂ ರಾತ್ರಿಯಿಡಿ ಜಾಗರಣೆ ನಡೆಯಿತು. ಶಿವರಾತ್ರಿ ನಿಮಿತ್ತ ಉಪವಾಸ ಮಾಡುವ ಮೂಲಕ ಶಿವನಿಗೆ ಭಕ್ತಿ ಸಮರ್ಪಿಸಿದರು.

ವಿಶೇಷ ಅಲಂಕಾರ: ನಗರದ ಗೋಕುಲ ರಸ್ತೆಯ ಶಿವಪುರ ಕಾಲನಿಯ ಬೃಹದಾಕಾರದ ಶಿವನ ಮೂರ್ತಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಯುವಕ- ಯುವತಿಯರು ಶಿವನ ಮೂರ್ತಿಯ ದರ್ಶನ ಪಡೆದರು.

ಸರದಿಯಲ್ಲಿ ನಿಂತು ದರ್ಶನ: ಉಣಕಲ್ ಕ್ರಾಸ್‌ನಲ್ಲಿರುವ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನ, ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಹಳೇ ಹುಬ್ಬಳ್ಳಿ ವೀರಭದ್ರೇಶ್ವರ ದೇವಸ್ಥಾನ, ಸ್ಟೇಷನ್ ರಸ್ತೆಯ ಈಶ್ವರ ದೇವಸ್ಥಾನ, ಹಳೆಯ ಕೋರ್ಟ್ ವೃತ್ತದ ಸಾಯಿ ಮಂದಿರ, ಕೇಶ್ವಾಪುರದ ಪಾರಸ್ವಾಡಿ ಕಾಶಿ ವಿಶ್ವನಾಥ ದೇವಸ್ಥಾನ, ಗೋಕುಲ ರಸ್ತೆಯಲ್ಲಿರುವ ರಾಜಧಾನಿ ಕಾಲನಿಯ ಗಣೇಶ ಮತ್ತು ಈಶ್ವರ ದೇವಸ್ಥಾನ ಸೇರಿದಂತೆ ವಿವಿಧೆಡೆ ವಿಶೇಷ ಅಲಂಕಾರ ಪೂಜೆ, ರುದ್ರಾಭಿಷೇಕ ಹಾಗೂ ಮಹಾ ಮಂಗಳಾರತಿ ನಡೆಯಿತು.

ಸದ್ಭಾವನಾ ಯಾತ್ರೆ: ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಮಹಾಶಿವರಾತ್ರಿ ಅಂಗವಾಗಿ ಸದ್ಭಾವನಾ ಶಾಂತಿಯಾತ್ರೆ ಸಂಭ್ರಮದಿಂದ ನೆರವೇರಿತು. ಬಂಕಾಪುರ ಚೌಕ್ ಬಳಿಯ ಆಶ್ರಮದಿಂದ ಆರಂಭವಾದ ಸದ್ಭಾವನಾ ಯಾತ್ರೆಯು ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವ ಣಿಗೆಯಲ್ಲಿ ಶಿವಲಿಂಗಗಳಿಂದ ಅಲಂಕೃತಗೊಂಡ ವಾಹನ, ಶಿವ ಸಂದೇಶ ಸಾರುವ ಘೋಷಣೆಗಳು, ಸ್ತಬ್ದಚಿತ್ರಗಳು ವಿಶೇಷ ಗಮನ ಸೆಳೆದವು.

ಸಿದ್ಧಾರೂಢರ ಮಠದಲ್ಲೂ ಸಂಭ್ರಮ: ಭಕ್ತರ ಪ್ರಮುಖ ಶ್ರದ್ಧಾಕೇಂದ್ರವಾಗಿರುವ ಇಲ್ಲಿನ ಸಿದ್ಧಾರೂಢರ ಮಠದಲ್ಲೂ ಬುಧವಾರ ಶಿವರಾತ್ರಿ ಸಂಭ್ರಮ ಮನೆ ಮಾಡಿತು. ಬುಧವಾರ ಬೆಳಗ್ಗೆಯಿಂದಲೇ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಆರೂಢರ ಗದ್ದುಗೆಗಳ ದರ್ಶನ ಪಡೆದರು. ಶ್ರೀಮಠದ ಆವರಣದಲ್ಲಿ ರಾತ್ರಿಯಿಡೀ ಜಾಗರಣೆ ನಡೆಯಿತು. ಸಾವಿರಾರು ಭಕ್ತರು ರಾತ್ರಿಯಿಡೀ ಶಿವನಾಮ ಸ್ಮರಣೆ, ಭಜನೆಯಲ್ಲಿ ಪಾಲ್ಗೊಳ್ಳುವ ಮೂಲಕ ಭಕ್ತಿ ಸಮರ್ಪಿಸಿದರು.

ದರ್ಶನಕ್ಕೆ ಸರದಿಯಲ್ಲಿ ನಿಂತಿರುವ ಭಕ್ತರು.

ಕಾಶಿ ವಿಶ್ವನಾಥನ ಮಾದರಿ ಶಿವಲಿಂಗ

ಹುಬ್ಬಳ್ಳಿಯ ಜಿಮಖಾನಾ ಮೈದಾನದಲ್ಲಿ ಬುಧವಾರ ಕಾಶಿ ವಿಶ್ವನಾಥ ಮಂದಿರದ ಮಾದರಿಯಲ್ಲಿ ಶ್ರೀ ವಿಶ್ವನಾಥನ ಶಿವಲಿಂಗ ದರ್ಶನದ ವ್ಯವಸ್ಥೆ ಕಲ್ಪಿಸಿರುವುದು.

ಇಲ್ಲಿನ ದೇಶಪಾಂಡೆ ನಗರದ ಜಿಮಖಾನಾ ಮೈದಾನದಲ್ಲಿ ಕ್ಷಮತಾ ಸೇವಾ ಸಂಸ್ಥೆ ನೇತೃತ್ವದಲ್ಲಿ ಬುಧವಾರ ಕಾಶಿ ವಿಶ್ವನಾಥ ಮಂದಿರದ ಮಾದರಿಯಲ್ಲಿ ಶ್ರೀ ವಿಶ್ವನಾಥನ ಶಿವಲಿಂಗದ ದರ್ಶನದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಸಾವಿರಾರು ಭಕ್ತರು ಆಗಮಿಸಿ ಸರದಿ ಸಾಲಿನಲ್ಲಿ ನಿಂತು ದರ್ಶನ ಪಡೆದರು. ಬೆಳಗ್ಗೆ ಮಹಾಪೂಜೆ, ರುದ್ರಾಭಿಷೇಕ ಹಾಗೂ ಮುಂಡಗೋಡ ಹಿರೇಮಠದ ಪಂ. ರುದ್ರಮುನಿ ಶ್ರೀಗಳ ಸಾನ್ನಿಧ್ಯದಲ್ಲಿ ವಿವಿಧ ಪೂಜಾ ಕಾರ್ಯಗಳು ನಡೆದವು. ಭಕ್ತರಿಗೆ ಪಂಚಮುಖಿ ರುದ್ರಾಕ್ಷಿ ವಿತರಣೆ ಹಾಗೂ ಅಹೋರಾತ್ರಿ ಪ್ರಸಾದ ವಿತರಣೆಯ ವ್ಯವಸ್ಥೆ ಮಾಡಲಾಯಿತು.

ಸಂಜೆ ಸುಜಾತಾ ಗುರವ್ ಅವರಿಂದ ಮರಾಠಿ ಅಭಂಗ ವಚನಗೀತೆ , ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಹುಬ್ಬಳ್ಳಿಯ ಮಯೂರ ನೃತ್ಯ ಅಕಾಡೆಮಿ ಅವರಿಂದ ಶಿವತಾಂಡವ ನೃತ್ಯ ಕಾರ್ಯಕ್ರಮ, ಬ್ಯಾಂಡ್ ಕಲ್ಕಿ ತಂಡದಿಂದ ಶಿವಾರಾಧನೆ, ಖ್ಯಾತ ಹಿನ್ನೆಲೆ ಗಾಯಕ ಚೇತನ ನಾಯಕ ಹಾಗೂ ಸಿಂಚನಾ ದೀಕ್ಷಿತ್ ಹಾಗೂ ತಂಡದಿಂದ ಶಿವನಾಮ ಸಂಗೀತ ರಸ ಸಂಜೆ ನಡೆಯಿತು. ಬೆಳಗ್ಗೆ ನಡೆದ ಪೂಜಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಪಾಲ್ಗೊಂಡು ಪೂಜೆ ಸಲ್ಲಿಸಿದರು. ಈ ವೇಳೆ ಶಾಸಕ ಮಹೇಶ ಟೆಂಗಿನಕಾಯಿ, ಪಾಲಿಕೆ ಮೇಯರ್ ರಾಮಪ್ಪ ಬಡಿಗೇರ, ಪಾಲಿಕೆ ಸದಸ್ಯ ವೀರಣ್ಣ ಸವಡಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಧಾರವಾಡದಲ್ಲಿ ಶಿವನಾಮವೇ ಶಿವರಾತ್ರಿ...!

ಸೋಮೇಶ್ವರ, ಕಲ್ಮೇಶ್ವರ, ಶಿವಾಲಯಗಳಲ್ಲಿ ಶಿವನಿಗೆ ಪೂಜೆ | ವಿವಿಧ ಧಾರ್ಮಿಕ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಧಾರವಾಡ

ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದ ಇಲ್ಲಿಯ ಶ್ರೀ ಕ್ಷೇತ್ರ ಸೋಮೇಶ್ವರ ದೇವಸ್ಥಾನ ಸೇರಿದಂತೆ ಧಾರವಾಡದ ಹತ್ತು-ಹಲವು ಶಿವನ ದೇವಸ್ಥಾನದಲ್ಲಿ ಶಿವರಾತ್ರಿ ಅರ್ಥಪೂರ್ಣವಾಗಿ ಆಚರಣೆಗೊಂಡಿತು.

ಶಿವನ ಆರಾಧನೆಗೆ ವಿಶೇಷ ದಿನವಾದ ಮಹಾ ಶಿವರಾತ್ರಿಯನ್ನು ಧಾರವಾಡದಲ್ಲಿ ಬುಧವಾರ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು. ಬೆಳಗ್ಗೆಯಿಂದಲೇ ಶಿವನ ದೇವಸ್ಥಾನಗಳಲ್ಲಿ ಶಿವಲಿಂಗ ದರ್ಶನ, ಪೂಜೆ-ಪುನಸ್ಕಾರಕ್ಕಾಗಿ ಸರತಿ ಸಾಲಿನಲ್ಲಿ ನಿಂತ ಭಕ್ತ ಸಮೂಹವು ಶಿವನಾಮ ಸ್ಮರಿಸಿ ಕೃತಾರ್ಥರಾದರು.

ಸೋಮೇಶ್ವರ ದೇವಸ್ಥಾನ, ಕೆಲಗೇರಿಯ ಕಲ್ಮೇಶ್ವರ ದೇವಸ್ಥಾನದಲ್ಲಿ ಉದ್ಭವ ಶಿವ ಲಿಂಗಕ್ಕೆ ನಸುಕಿನ ಜಾವದಿಂದಲೇ ಅಭಿಷೇಕ, ವಿಶೇಷ ಪೂಜೆ, ಬಿಲ್ವಾರ್ಚನೆ ಪ್ರಾರಂಭಿಸ ಲಾಗಿತ್ತು. ಬೆಳಗ್ಗೆಯೇ ದೇವಸ್ಥಾನಕ್ಕೆ ಆಗಮಿಸಿದ ಭಕ್ತರು ಬಿಸಿಲನ್ನೂ ಲೆಕ್ಕಿಸದೆ ಕಿ.ಮೀ ಉದ್ದದ ಸರದಿಯಲ್ಲಿ ನಿಂತು ಶಿವನ ದರ್ಶನ ಪಡೆದರು. ಇದಲ್ಲದೇ ಜಯನಗರ ಈಶ್ವರ ದೇವಾಲಯ, ಶ್ರೀನಗರದಲ್ಲಿನ ಶಿವಾಲಯ, ಗಾಂಧಿನಗರದ ಈಶ್ವರ ದೇವ ಸ್ಥಾನ, ಕಾಮನಕಟ್ಟಿ ಬ್ರಹ್ಮಲಿಂಗೇಶ್ವರ ದೇವಾಲಯ, ಹೆಬ್ಬಳ್ಳಿ ಅಗಸಿ ಈಶ್ವರ ದೇವಾಲಯ, ಎಪಿಎಂಸಿ ಶಂಭುಲಿಂಗೇಶ್ವರ ದೇವಾಲಯ, ಶುಕ್ರವಾರ ಪೇಟ ಮುಖ್ಯ ರಸ್ತೆ ರಾಮ ಲಿಂಗೇಶ್ವರ ದೇವಸ್ಥಾನ, ಹೊಸ ಓಣಿಯ ಕಲ್ಮೇಶ್ವರ ದೇವಾಲಯ, ತುಂಗಭದ್ರೇಶ್ವರ ದೇವಾಲಯ, ಜೋಶಿ ಗಲ್ಲಿಯ ಸಿದ್ಧರಾಮೇಶ್ವರ ದೇವಾಲಯ, ದೇಶಪಾಂಡೆ ಓಣಿ ತಾರಕೇಶ್ವರ ದೇವಸ್ಥಾನ, ಕುಮಾರೇಶ್ವರ ನಗರದ ಈಶ್ವರ ದೇವಸ್ಥಾನ, ವನಸಿರಿನಗರದ ನಾಗೇಶ್ವರ ದೇವಸ್ಥಾನ ಸೇರಿ ನಗರ ಹಾಗೂ ಗ್ರಾಮೀಣ ಪ್ರದೇಶದ ಹಲವು ಶಿವ ದೇವಾಲಯಗಳಲ್ಲಿ ಮಹಾ ಶಿವರಾತ್ರಿ ವಿಶೇಷ ಪೂಜೆ ನಡೆಸಲಾಯಿತು.

ಕೆಲಗೇರಿಯ ಕಲ್ಮೇಶ್ವರ ದೇವಸ್ಥಾನದಲ್ಲಿ ಶಿವಲಿಂಗಕ್ಕೆ ಭಕ್ತರು ಪೂಜೆ ಸಲ್ಲಿಸಿದರು.

ದೇವಾಲಯಗಳಲ್ಲಿ ರುದ್ರಾಭಿಷೇಕ, ಶಿವನಾಮ ಧ್ಯಾನದ ಮೂಲಕ ಶಿವನನ್ನು ಆರಾಧಿಸಿದರೆ ಇನ್ನೂ ಕೆಲ ಕಡೆಗಳಲ್ಲಿ ವಿಶೇಷ ಪೂಜೆ ಮಾಡಲಾಗಿತ್ತು. ಬಿಲ್ವಾರ್ಚನೆ, ಮಹಾರುದ್ರಾಭಿಷೇಕ, ಶಿವಸ್ಮರಣೆ, ಭಜನೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಗ್ರಾಮೀಣ ಪ್ರದೇಶದಲ್ಲಿ ಶಿವರಾತ್ರಿ ನಿಮಿತ್ತ ಆಯಾ ಗ್ರಾಮದ ಶಿವಲಿಂಗ ದೇವಸ್ಥಾನಗಳಿಗೆ ತೆರಳಿದ ಭಕ್ತರು, ಶಿವಲಿಂಗಕ್ಕೆ ವಿಶೇಷ ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ಉಪಾಸನೆ ಕೈಗೊಂಡು ರಾತ್ರಿ ಇಡೀ ಜಾಗರಣೆ ಮಾಡಿದ ಭಕ್ತರು ಶಿವನಾಮ ಸ್ಮರಿಸಿದರು.

ಇನ್ನು, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ ಕಡಪಾ ಮೈದಾನದಲ್ಲಿ ಆಯೋಜಿಸಿದ್ದ ಶಿವರಾತ್ರಿ ಉತ್ಸವದಲ್ಲಿ ಪುರಾತನ ರಥದಲ್ಲಿ ಸುವರ್ಣ ವರ್ಣದ ಜ್ಯೋತಿರ್ಲಿಂಗ ಗಮನ ಸೆಳೆಯುತ್ತಿದೆ. ಶಿವ ಭಕ್ತರು ಜ್ಯೋತಿರ್ಲಿಂಗ ರಥ ಯಾತ್ರೆಯನ್ನು ವೀಕ್ಷಿಸಿದರು. ಸತ್ತೂರಿನ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶಿವರಾತ್ರಿ ಹಬ್ಬದ ಸಂಭ್ರಮದಲ್ಲಿ ನವಚೇತನ ವೈಭವ ನೃತ್ಯ ಕಾರ್ಯಕ್ರಮ ನಡೆಯಿತು. ಕೊಪ್ಪದಕೇರಿಯ ಶಿವಾಲಯದಲ್ಲಿ ಡಾ. ಎಸ್.ಆರ್. ರಾಮನಗೌಡರ ಶಿವರಾತ್ರಿ ನಿಮಿತ್ತ ಭಗವಾ ಧ್ವಜಾರೋಹಣ ನೆರವೇರಿಸಿದರು.

ಶಿವರಾತ್ರಿಯಲ್ಲಿ ಶಿವನ ನಾಮ ಮಾತ್ರವಲ್ಲದೇ ಉಪವಾಸ ಪ್ರಮುಖ ಪಾತ್ರ ವಹಿಸಿದೆ. ಬುದ್ಧಿಯೋಗವನ್ನು ನಿರಾಕಾರ ಪರಮಪಿತ ಪರಮಾತ್ಮನ ಜೊತೆ ಜೋಡಿಸುವುದೇ ಸತ್ಯ ಉಪವಾಸ. ಭಕ್ತರು ದೇವರ ಚಿಂತನೆ ಮಾಡುತ್ತ ಸ್ಥೂಲ ಜಾಗರಣೆ ಮಾಡುತ್ತಾರೆ. ವಾಸ್ತವಿಕವಾಗಿ ಒಂದು ರಾತ್ರಿ ನಿದ್ರೆಗೆಟ್ಟು ಜಾಗರಣೆ ಮಾಡಿದರೆ ಸಾಲದು. ಈ ಜ್ಞಾನದ ಅಂಧಕಾರದ ರಾತ್ರಿಯಲ್ಲಿ ಸದಾಕಾಲ ಎಚ್ಚರವಾಗಿದ್ದು, ಮಾಯೆಯ ರೂಪವಾದ, ಕಾಮ, ಕ್ರೋಧ, ಲೋಭ, ಮೋಹ, ಅಹಂಕಾರಗಳ ಮೇಲೆ ವಿಜಯಗಳಿಸಬೇಕು ಎಂಬುದು ಇದರ ಅರ್ಥವಾಗಿದೆ. ಹೀಗೆ ಶಿವರಾತ್ರಿಯ ಆಧ್ಯಾತ್ಮಿಕ ರಹಸ್ಯವನ್ನು ತಿಳಿದುಕೊಂಡು ನಿಜವಾದ ರೀತಿಯಲ್ಲಿ ಜಾಗರಣೆ ಹಾಗೂ ಉಪವಾಸ ಮಾಡಿದರೆ ವಿಶ್ವ ಪರಿವರ್ತನೆಯಾಗುವುದರಲ್ಲಿ ಸಂದೇಹವಿಲ್ಲ ಎಂದು ಈಶ್ವರೀಯ ವಿವಿ ಬ್ರಹ್ಮಕುಮಾರಿಗಳು ಶಿವರಾತ್ರಿ ಉಪವಾಸದ ಬಗ್ಗೆ ಹೇಳುತ್ತಾರೆ.

ಧಾರವಾಡ ಸಮೀಪದ ಕೆಲಗೇರಿಯ ಕಲ್ಮೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ನಿಮಿತ್ತ ಬುಧವಾರ ಶಿವಲಿಂಗಕ್ಕೆ ಭಕ್ತರು ಪೂಜೆ ಸಲ್ಲಿಸಿದರು.

ಉಚಿತ ಸೇವೆಗೆ ಸಜ್ಜಾದ 500 ಆಟೋ!

ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘದಿಂದ ಅಜ್ಜನ ಜಾತ್ರೆಯಲ್ಲಿ ಸೇವೆ

ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘದಿಂದ ಉಚಿತ ಆಟೋ ಸೇವೆ ಒದಗಿಸಲಾಗಿದೆ,.

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಅಜ್ಜನ ಜಾತ್ರೆಗೆ ಮೆರುಗು ತರಲು ನಗರದ ಆಟೋ ಚಾಲಕರೂ ಕೈಜೋಡಿಸಿದ್ದಾರೆ. ಕಳೆದ 14-15 ವರ್ಷಗಳಿಂದ ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘದಿಂದ ನಗರದ ವಿವಿಧ ಭಾಗಗಳಿಂದ ಉಚಿತ ಆಟೋ ಸೇವೆ ಕೈಗೊಳ್ಳುತ್ತಿದ್ದಾರೆ. ಮೊದಮೊದಲು 7-8 ಆಟೋಗಳಿಂದ ಆರಂಭವಾದ ಈ ಸೇವೆ ಇಂದು 500ಕ್ಕೂ ಅಧಿಕ ಆಟೋಗಳು ಶಿವರಾತ್ರಿಯ ದಿನವಾದ ಬುಧವಾರ ಹಾಗೂ ಸಿದ್ಧಾರೂಢರ ಜಾತ್ರಾ ಮಹೋತ್ಸವದ ದಿನವಾದ ಗುರುವಾರ ಎರಡು ದಿನಗಳ ಕಾಲ ಉಚಿತ ಆಟೋ ಸೇವೆ ಒದಗಿಸುತ್ತಿವೆ.

ನಗರದ ರೈಲು ನಿಲ್ದಾಣ, ಚೆನ್ನಮ್ಮ ವೃತ್ತದ ಬಳಿ ಇರುವ ಹಳೆ ಬಸ್ ನಿಲ್ದಾಣ, ಹೊಸೂರು, ಗೋಕುಲ ರಸ್ತೆಯಲ್ಲಿರುವ ಹೊಸ ಬಸ್ ನಿಲ್ದಾಣ, ಡಾ. ಅಂಬೇಡ್ಕರ್ ವೃತ್ತ, ಅಕ್ಷಯ ಪಾರ್ಕ್, ವಿಮಾನ ನಿಲ್ದಾಣ, ಸಿಬಿಟಿ, ದುರ್ಗದಬೈಲ್, ಹಳೆ ಹುಬ್ಬಳ್ಳಿಯ ಈಶ್ವರ ನಗರ, ನೇಕಾರ ನಗರ ಸೇರಿದಂತೆ 15ಕ್ಕೂ ಅಧಿಕ ಕಡೆಗಳಿಂದ ಉಚಿತ ಆಟೋ ಸೇವೆ ಒದಗಿಸುತ್ತಿದ್ದು, ಆಗಮಿಸುವ ಭಕ್ತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘದ ರಾಜ್ಯಾಧ್ಯಕ್ಷ ಶೇಖರಯ್ಯ ಮಠಪತಿ ತಿಳಿಸಿದರು.

ಮಾಂಟಿ ವಿದ್ಯಾ ಸಂಸ್ಥೆ (ರಿ)
ವಿದ್ಯಾ ನಿವೇದಿತ ಸಂಸ್ಕೃತ ಪಾಠಶಾಲೆ
#51/53, ನಂಜುಂಡೇಶ್ವರ ನಗರ, ನಂದಿನಿ ಬಡಾವಣೆ, ಬೆಂಗಳೂರು-96

ಸಂಖ್ಯೆ: ಮಾ.ವಿ.ಸಂ/ವಿ.ನಿ.ಸಂ.ಪಾ/2024-25/12 ದಿನಾಂಕ: 26.02.2025

ನೇಮಕಾತಿ ಪ್ರಕಟಣೆ

ನಮ್ಮ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ವಿದ್ಯಾ ನಿವೇದಿತ ಸಂಸ್ಕೃತ ಪಾಠಶಾಲೆ #51/53, ನಂಜುಂಡೇಶ್ವರ ನಗರ, ನಂದಿನಿ ಬಡಾವಣೆ, ಬೆಂಗಳೂರು-96 ರ ಪಾಠಶಾಲೆಯು ಪ್ರಥಮ, ಕಾವ್ಯ, ಸಾಹಿತ್ಯ, ತರಗತಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ ಅನುದಾನ ಸಹಿತವಾಗಿ ಮಾನ್ಯತೆಯನ್ನು ಪಡೆದಿರುತ್ತದೆ ಹಾಗೂ ಸಂಸ್ಕೃತ ಪಾಠಶಾಲೆಗಳ ಅನುದಾನ ಸಂಹಿತೆ 1979ರ ನಿಯಮ ನಿಬಂಧನೆಗಳಿಗೆ ಒಳಪಡಿಸಿ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಆದೇಶ ಸಂಖ್ಯೆ: ಕಸಂವಿ/ಸಂ.ಶಿ.ವಿ.ನಿ.ಸಂ.ಪಾ.ಖಾ.ಹು.ಭ/2024-25/343ರ ಅನ್ವಯ ಸರ್ಕಾರದ ವೇತನಾನುದಾನ ಅನುಮೋದನೆಯನ್ನು ಕಾಯ್ದಿರಿಸಿ, ಪಾಠಶಾಲೆಯಲ್ಲಿ ಖಾಲಿಯಿರುವ ಈ ಕೆಳಕಂಡ ಸಂಸ್ಕೃತ ಸಹ-ಶಿಕ್ಷಕ ಹುದ್ದೆಯನ್ನು ನಿಯಮಾನುಸಾರ ಅನುದಾನ ರಹಿತವಾಗಿ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಪಾಠಶಾಲೆಯ ಹೆಸರು	ಹುದ್ದೆಯ ಹೆಸರು/ ವೇತನ ಶ್ರೇಣಿ	ಹುದ್ದೆ ಸಂಖ್ಯೆ	ಮೀಸಲಾತಿ ಬಿಂದು	ಮೀಸಲಾತಿ	ವಿದ್ಯಾರ್ಹತೆ
01.	ವಿದ್ಯಾ ನಿವೇದಿತ ಸಂಸ್ಕೃತ ಪಾಠಶಾಲೆ #51/53, ನಂಜುಂಡೇಶ್ವರ ನಗರ, ನಂದಿನಿ ಬಡಾವಣೆ, ಬೆಂಗಳೂರು-96	ಸಂಸ್ಕೃತ ಸಹ ಶಿಕ್ಷಕರು (34,100/- 67-600/-)	01	ಬಿಂದು ಸಂಖ್ಯೆ- 03	ಪರಿಶಿಷ್ಟ ಪಂಗಡ (ಎಸ್.ಟಿ)	ಎಸ್ ಎಸ್ ಎಲ್ ಸಿ, ಸಂಸ್ಕೃತ ಸಾಹಿತ್ಯ ವಿದ್ವನ್ಮಧ್ಯಮಾ ಅಥವಾ ಬಿ.ಎ (ಸಂಸ್ಕೃತ ಮೇಜರ್)

1. ಪತ್ರಿಕಾ ಪ್ರಕಟಣೆಗೊಂಡ 21 ದಿನಗಳೊಳಗಾಗಿ ಕಾರ್ಯದರ್ಶಿಯವರ ಹೆಸರಿಗೆ ರೂ. 300 ಡಿ.ಡಿ.ಯೊಂದಿಗೆ ಶಾಲಾ ವಿಳಾಸಕ್ಕೆ ಅರ್ಜಿ ಸಲ್ಲಿಸುವುದು.
2. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲದಾಖಲೆ ಹಾಗೂ ಪ್ರಮಾಣಪತ್ರ ಜೆರಾಕ್ಸ್‌ಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು.
3. ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಅಭ್ಯರ್ಥಿಗಳು ಸಂಬಂಧಿಸಿದ ತಹಸೀಲ್ದಾರ್ ಅವರಿಂದ ಜಾತಿ ಪ್ರಮಾಣ ಪತ್ರವನ್ನು ಸಂದರ್ಶನ ವೇಳೆಯಲ್ಲಿ ತರುವುದು.
5. ಅಭ್ಯರ್ಥಿಯ ವಯೋಮಿತಿ ಕನಿಷ್ಠ 18 ವರ್ಷದಿಂದ ಗರಿಷ್ಠ 45 ವರ್ಷಗಳು.

ಸಹಿ/-
ಕಾರ್ಯದರ್ಶಿಗಳು,
#51/53, ನಂಜುಂಡೇಶ್ವರ ನಗರ,
ನಂದಿನಿ ಬಡಾವಣೆ, ಬೆಂಗಳೂರು-96

ಸಾರ್ವಜನಿಕ ಎಚ್ಚರಿಕೆ ನೋಟಿಸು

ನಮ್ಮ ಪಕ್ಷಗಾರರಾದ 1) ಶ್ರೀ ಸಿದ್ಧಾರ್ಥ ತಂದೆ ಗದಿಗೆಪ್ಪ ಬುಳ್ಳಣ್ಣವರ 2) ಶ್ರೀ ರವಿ ತಂದೆ ರಾಮಪ್ಪ ಬುಳ್ಳಣ್ಣವರ 3) ಶ್ರೀ ಕೃಷ್ಣ ತಂದೆ ರಾಮಪ್ಪ ಬುಳ್ಳಣ್ಣವರ ಎಲ್ಲರೂ ಸಾ|| ನೂಲ್ವಿ ತಾ|| ಹುಬ್ಬಳ್ಳಿ ಜಿ|| ಧಾರವಾಡ ಇವರು ಕೊಟ್ಟ ಮಾಹಿತಿ ವ, ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ಎಚ್ಚರಿಕೆ ನೋಟಿಸು ಏನೆಂದರೆ,

ನಮ್ಮ ಪಕ್ಷಗಾರರು ಕುಂದಗೋಳ ತಾಲೂಕ ಪೈಕಿ ಕುಂದಗೋಳ ಹೋಬಳಿಗೆ ಸಂಬಂದಿಸಿದ ಕುಂದಗೋಳ ಗ್ರಾಮದ ಹದ್ದಿಯಲ್ಲಿ ಬರುವ ಕೃಷಿ ಸಾಗುವಳಿ ಎರೆ ಜಮೀನು ಇದರ ರಿ.ಸ.ನಂ 150/3 ಕ್ಷೇತ್ರ 07 ಎಕರೆ 37 ಗುಂಟೆ ಆಕಾರ 25-30 ನೇದ್ದರ ಜಮೀನು ಶ್ರೀ ಅಭಿಷೇಕ ತಂದೆ ಪ್ರಕಾಶ ಪಲ್ಲೇದ ಸಾ|| ಕುಂದಗೋಳ ತಾ|| ಕುಂದಗೋಳ ಜಿ|| ಧಾರವಾಡ ಇವರ ಮನೆತನಕ್ಕೆ ಸೇರಿದ ಕೃಷಿ ವಹಿವಾಟಿಯುಳ್ಳ ಜಮೀನು ಇರುತ್ತದೆ. ಸದರಿ ಜಮೀನನ್ನು ಸದರಿಯವರು ತಮ್ಮ ಸ್ವಂತ ಮಾಲ್ಕಿ ಪ್ರತ್ಯಕ್ಷ ಕಬ್ಜಾ ವಹಿವಾಟಿಯಲ್ಲಿಟ್ಟುಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಮತ್ತು ಇವರಿಂದ ನಮ್ಮ ಪಕ್ಷಗಾರರು ಸದರೀ ಈ ಮೇಲ್ಕಂಡ ಜಮೀನಿನಲ್ಲಿ 02 ಎಕರೆ ಜಮೀನನ್ನು ಖರೀದಿಗೆ ತೆಗೆದುಕೊಳ್ಳುವವರು ಇರುತ್ತಾರೆ. ಕಾರಣ ಮೇಲ್ಕಂಡ ಜಮೀನಿನ ಬಗ್ಗೆ ಯಾರದಾದರೂ ತಂಟೆ, ತಕರಾರುಗಳು, ವ, ಹಕ್ಕು ಹಿತಾಸಕ್ತಿ ಹಣಕಾಸಿನ ವ್ಯವಹಾರ ಬೋಜಾ, ವಗೈರೆ ಇದ್ದಲ್ಲಿ ಅಂತವರು ಈ ನೋಟಿಸು ದಿನಪತ್ರಿಕೆಯಲ್ಲಿ ಪ್ರಕಟಗೊಂಡ 07 ದಿನಗಳ ಒಳಗಾಗಿ ಕೆಳಗೆ ಕಾಣಿಸಿದ ನಮ್ಮ ವಿಳಾಸಕ್ಕೆ ಸದರಿ ಈ ಮೇಲ್ಕಂಡ ಜಮೀನಿನ ಕುರಿತು ಯಾವುದೇ ರೀತಿಯಾದಂತಹ ತಂಟೆ, ತಕರಾರುಗಳು ಇದ್ದಲ್ಲಿ ತಮ್ಮ ತಕರಾರುಗಳನ್ನು ಲಿಖಿತವಾಗಿಯಾಗಲಿ, ಅಥವಾ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಸಲ್ಲಿಸಬೇಕು. ನಂತರದಲ್ಲಿ ಬಂದ ಯಾವುದೇ ರೀತಿಯಾದ ತಕರಾರುಗಳನ್ನು ನಮ್ಮ ಪಕ್ಷಗಾರರು ಗಣನೆಗೆ ತೆಗೆದುಕೊಳ್ಳುವದಿಲ್ಲ, ಮತ್ತು ಖರೀದಿ ವ್ಯವಹಾರ ಮಾಡಿಕೊಳ್ಳುವವರು ಇರುತ್ತಾರೆ. ಅಂತಾ ಕೊಟ್ಟ ಸಾರ್ವಜನಿಕ ಎಚ್ಚರಿಕೆ ನೋಟಿಸು.

ಕುಂದಗೋಳ
ದಿನಾಂಕ: 25.02.2025

ಸಹಿ/- ಶ್ರೀ ಅಶೋಕ ವಿ ಕ್ಯಾರಕಟ್ಟಿ
ವಕೀಲರು, ಕುಂದಗೋಳ ಅಂಜುಮನ್ ಕಾಂಪ್ಲೆಕ್ಸ್
ಕುಂದಗೋಳ

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ತುಮಕೂರು,

ಸಂಖ್ಯೆ:ಕಾಇಂ/ಪಂರಾಇವಿ/ತುಮ/ಎಇ-1/ವಾ. ಟೆಂಡರ್/2024-25 ದಿನಾಂಕ:20-02-2025

ಟೆಂಡರ್ ಪ್ರಕಟಣೆ ಸಂಖ್ಯೆ- 23/2024-25
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಟೆಂಡರ್‌ಗಳನ್ನು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆ.ಪಿ.ಪಿ.ಪಿ. ಪೋರ್ಟಲ್) (ಸಪೋರ್ಟ್‌ಗಾಗಿ 1/1 ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್. ಬೆಂಗಳೂರು-560025, ದೂರವಾಣಿ: 080-22485867, 080-22485927) ರಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರು/ಏಜೆನ್ಸಿಯವರಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕುಣಿಗಲ್ ಕಚೇರಿಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ವಾಹನ ಸರಬರಾಜು ಮಾಡುವ ಬಗ್ಗೆ ಟೆಂಡರ್‌ನ್ನು **ಕೆ.ಪಿ.ಪಿ. ಪೋರ್ಟಲ್** ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **https://kppp.karnataka.gov.in** ಮುಖಾಂತರ **ದಿನಾಂಕ: 21.02.2025 ರಿಂದ 07.03.2025. ಸಂಜೆ 5.00 ಗಂಟೆ**ವರೆಗೆ ಫಾರಂ ಫೀ ಕೆ.ಪಿ.ಪಿ. ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಟೆಂಡರ್ ತೆರೆಯುವ **ದಿನಾಂಕ: 09.03.2025. ರಂದು ಸಂಜೆ 5.10 ಗಂಟೆ** ನಂತರ, ಈ ಬಗ್ಗೆ ಸಂಪೂರ್ಣ ವಿವರಗಳನ್ನು **https://kppp.karnataka.gov.in** ನಲ್ಲಿ ಲಾಗ್ ಇನ್ ಆಗುವ ಮುಖಾಂತರ ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816-2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ- ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/RO-185/24-25/Oysters

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in

ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2024-25/8300 ದಿನಾಂಕ:21.02.2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024-25ನೇ ಸಾಲಿನ 2024-25 ನೇ ಸಾಲಿನ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ **ಸಾಮಾನ್ಯ ಗುತ್ತಿಗೆದಾರರ: 11** ಕಾಮಗಾರಿಗಳು **ಪ್ರವರ್ಗ-1 ಗುತ್ತಿಗೆದಾರರ 1** ಕಾಮಗಾರಿಗಳು **ಪ್ರವರ್ಗ-2(ಎ) ಗುತ್ತಿಗೆದಾರರ 3** ಕಾಮಗಾರಿಗಳು **ಪರಿಶಿಷ್ಟ ಜಾತಿ ಗುತ್ತಿಗೆದಾರರ 4** ಕಾಮಗಾರಿಗಳು **ಪರಿಶಿಷ್ಟ ಪಂಗಡ ಗುತ್ತಿಗೆದಾರರ 1** ಕಾಮಗಾರಿಗಳು **ರೂ. 10.00 ಲಕ್ಷದಿಂದ ರೂ.80.00 ಲಕ್ಷಗಳವರೆಗೆ ಒಟ್ಟು 20 ಕಾಮಗಾರಿಗಳಿಗೆ** ಕೆ.ಡಬ್ಲ್ಯೂ-1, 2 ಹಾಗೂ 3 ರ ಪ್ರಕಾರ ಈ ಕಚೇರಿಯ ಟೆಂಡರ ಪ್ರಕಟಣೆ **ಸಂಖ್ಯೆ: 8300 ದಿನಾಂಕ: 21.02.2025** ರಂತೆ ಕಾಮಗಾರಿಗಳನ್ನು ಇ-ಟೆಂಡರ್‌ನ್ನು ಅಹ್ವಾನಿಸಿದ್ದು, ಕೆ.ಪಿ.ಪಿ. ಪ್ರೋಟಲ್ ಮುಖಾಂತರ ಟೆಂಡರ್‌ನ್ನು ಸಲ್ಲಿಸುವ ಕೊನೆಯ **ದಿನಾಂಕ: 03.03.2025** ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ. ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.

ವಾಸಾಸಂಇ/ವಿಜಯಪುರ/722/ಕೆಎಸ್‌ಎಂಸಿಎ/2024-25

ಇ-ಹರಾಜು ಕಂ ಮಾರಾಟಕ್ಕಾಗಿನ ಸಾರ್ವಜನಿಕ ಸೂಚನೆ (ಅಪೆಂಡಿಕ್ಸ್-IV A)(ನಿಯಮ 8(6))

ಐಐಎಫ್‌ಎಲ್ ಹೋಮ್ ಫೈನಾನ್ಸ್ ಲಿಮಿಟೆಡ್ (ಹಿಂದೆ ಇಂಡಿಯಾ ಇನ್‌ಫೋಲೈನ್ ಹೌಸಿಂಗ್ ಫೈನಾನ್ಸ್ ಲಿ., ಎಂದು ಕರೆಯಲ್ಪಡುತ್ತಿದ್ದು) ಅಡಮಾನಿತವಾಗಿರುವ ಸ್ಥಿರ ಆಸ್ತಿ (ಐಐಎಫ್‌ಎಲ್-ಹೆಚ್‌ಎಫ್‌ಎಲ್) ಕಾರ್ಪೋರೇಟ್ ಕಛೇರಿ ಪ್ಲಾಟ್ ಸಂ. 98, ಉದ್ಯೋಗ್ ವಿಹಾರ್, ಫೇಸ್-IV, ಗುರುಗಾವ್-122015. (ಹರಿಯಾಣ) ಮತ್ತು ಶಾಖಾ ಕಛೇರಿ: ಸಿಟಿಎಸ್ ಸಂ. 163/5ಡಿ, **''ಕಲಬುರ್ಗಿ ಲ್ಯಾಂಡ್ ಮಾರ್ಕ್ ಕಟ್ಟಡ''** 1ನೇ ಮಹಡಿ, **ಕಲ್ಯಾಣ್‌ಪುರ್‌ಕರ್ ನರ್ಸಿಂಗ್ ಹೋಮ್ ನಂತರ, ದೇಶಪಾಂಡೆ ನಗರ, ಹುಬ್ಬಳ್ಳಿ- 580029.** ಆದಾಗ್ಯೂ, (''ಎಓ'') ಐಐಎಫ್‌ಎಲ್-ಹೆಚ್‌ಎಫ್‌ಎಲ್‌ನ ಅಧಿಕೃತ ಅಧಿಕಾರಿಯು ಸಾಲಗಾರನಿಂದ/ರುಗಳಿಂದ ಬಾಕಿ ವಸೂಲಾತಿಗಾಗಿ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ 2002ರ (ಇನ್ನು ಮುಂದೆ ''ಕಾಯಿದೆ'') ಭದ್ರತಾ ಹಿತಾಸಕ್ತಿ ಜಾರಿ ಯು/ಎಸ್ 13(2) ಕಾಯಿದೆಯಡಿ, (ಇನ್ನು ಮುಂದೆ ಆ್ಯಕ್ಟ್ ಎಂದು ಕರೆಯಲ್ಪಡುವುದು) ಕೆಳಕಂಡಂತೆ ವಿವರಿಸಲಾದ ಭದ್ರತಾ ಆಸ್ತಿಗಳನ್ನು ಮಾರಾಟದ ಹಕ್ಕಿನೊಂದಿಗೆ ಸಾಲದ ಖಾತೆ/ಪ್ರಾಸ್ಪೆಕ್ಟ್ ಸಂ. ಸ್ವಾಧೀನತೆ ಪಡೆದುಕೊಂಡಿದ್ದು ಸ್ವಾಧೀನದಲ್ಲಿರುವ ಸ್ಥಿರ ಆಸ್ತಿಗಳು/ಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಆಧಾರದಲ್ಲಿ'' ಐಐಎಫ್‌ಎಲ್-ಹೆಚ್‌ಎಫ್‌ಎಲ್‌ಗೆ ಬರಬೇಕಾದ ಬಾಕಿ ವಸೂಲಿಗಾಗಿ, ಈ ಕೆಳ ಸಹಿದಾರರು ಪ್ಲಾಟ್‌ಫಾರಂ ಪ್ರೊವೈಡರ್ ವೆಬ್‌ಸೈಟ್ **www.iiflonehome.com** ಮೂಲಕ ಇಲ್ಲಿ ಒದಗಿಸಲಾದ ಇ-ಪ್ಲಾಟ್‌ಫಾರಂ ಮೇಲೆ ಹರಾಜು ಮಾರಾಟ ಮಾಡುತ್ತಾರೆ.

ಸಾಲಗಾರ(ರು)/ ಸಹ ಸಾಲಗಾರ(ರು) ಜಾಮೀನುದಾರ(ರು)	ಡಿಮಾಂಡ್ ನೋಟೀಸಿನ ದಿನಾಂಕ ಮತ್ತು ಮೊತ್ತ	ಸ್ಥಿರಾಸ್ತಿ/ಭದ್ರತಾ ಆಸ್ತಿಗಳ ವಿವರಣೆ	ಭೌತಿಕ ಸ್ವಾಧೀನತೆಯ ದಿನಾಂಕ	ಮೀಸಲು ಬೆಲೆ
1.ಶ್ರೀ ಶೌಕತಲಿ ಪಾಟೀಲ 2.ಶ್ರೀಮತಿ ಮೋದಿನಾಬಿ ಹಜರತಗೌಡ ಪಾಟೀಲ, 3.ಮೋದಿನಬಿ ಹಜರತಗೌಡ ಪಾಟೀಲ್ 4. ಶ್ರೀಮತಿ ಮೌಲಾಲಿ ಹಜರತಗೌಡ ಪಾಟೀಲ, 5.ಮೌಲಾಲಿ ಹಜರತಗೌಡ ಪಾಟೀಲ್, 6.ಶೌಕತಲಿ ಪಾಟೀಲ್ (ಪ್ರಾಸ್ಪೆಕ್ಟ್ ಸಂಖ್ಯೆ IL10158411)	14-ಆಗಸ್ಟ್-2023 ರೂ. 7,71,113/- (ಏಳು ಲಕ್ಷದ ಎಪ್ಪತ್ತೊಂದು ಸಾವಿರದ ನೂರ ಹದಿಮೂರು ರೂ.ಗಳು ಮಾತ್ರ) ಬಿಡ್ ಹೆಚ್ಚಳದ ಮೊತ್ತ ರೂ. 25,000/- (ಇಪ್ಪತ್ತೈದು ಸಾವಿರ ರೂ.ಗಳು ಮಾತ್ರ)	ಸಕಲ ಸಮಸ್ತವೂ ಸೇರಿದಂತೆ ಆಸ್ತಿ ಸಂ. 28, ವಿಪಿ ಆಸ್ತಿಯ ಸಂ. 151300402100420075, ಭೂ ಪ್ರದೇಶ ಅಳತೆ- 1200 ಚ.ಅ. ಕಾರ್ಪೆಟ್ ಪ್ರದೇಶ ಅಳತೆ: 597 ಚ.ಅ. ನಿರ್ಮಿತ ಪ್ರದೇಶ ಅಳತೆ: 702 ಚ.ಅ. ನೋಂದಾಯಿತ ಗ್ರಾಮ ಪಿಎನ್‌ಸಿ 28, ಸರ್ಕಾರಿ ಶಾಲೆ ಹತ್ತಿರ, ತೀರ್ಥ ಗ್ರಾಮ, ತಾ. ಕುಂದಗೋಳ್, ಜಿಲ್ಲೆ: ಧಾರವಾಡ, ಕರ್ನಾಟಕ, ಭಾರತ-581205 (ಪ್ರದೇಶದ ಒಟ್ಟಾರೆ ಅಳತೆ 900 ಚ.ಅ)	27-ಸೆಪ್ಟೆಂಬರ್-2024 ಒಟ್ಟು ಬಾಕಿ ಮೊತ್ತ ದಿನಾಂಕ 05-ಫೆಬ್ರವರಿ-2025 ರೂ. 11,28,651/- (ಹನ್ನೊಂದು ಲಕ್ಷದ ಇಪ್ಪತ್ತೆಂಟು ಸಾವಿರದ ಆರು ನೂರ ಐವತ್ತೊಂದು ರೂ.ಮಾತ್ರ)	ರೂ. 14,04,000/- (ಹದಿನಾಲ್ಕು ಲಕ್ಷದ ನಾಲ್ಕು ಸಾವಿರ ರೂ.ಗಳು ಮಾತ್ರ) ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 1,40,400/- (ಒಂದು ಲಕ್ಷದ ನಲವತ್ತು ಸಾವಿರದ ನಾಲ್ಕುನೂರು ರೂ. ಗಳು ಮಾತ್ರ)

ಆಸ್ತಿಯ ಪರಿಶೀಲನಾ ದಿನಾಂಕ	ಇಎಂಡಿ ಕೊನೆಯ ದಿನಾಂಕ	ಇ-ಹರಾಜಿನ ದಿನಾಂಕ/ಸಮಯ
17-ಮಾರ್ಚ್-2025, 1100 ಗಂಟೆಯಿಂದ 1400ಗಂಟೆವರೆಗೆ	19-ಮಾರ್ಚ್-2025 ಸಂಜೆ 5 ಗಂಟೆವರೆಗೆ	21-ಮಾರ್ಚ್-2025, 1100 ಗಂಟೆಯಿಂದ-1300 ಗಂಟೆವರೆಗೆ

ಪಾವತಿ ವಿಧಾನ: ಇಎಂಡಿ ಪಾವತಿಯನ್ನು ಆನ್‌ಲೈನ್ ಮೋಡ್ ಮೂಲಕ ಮಾತ್ರ ಮಾಡಬೇಕು. ಪಾವತಿಗಳನ್ನು ಮಾಡಲು ಮತ್ತು ಆಸ್ತಿ/ಭದ್ರತಾ ಆಸ್ತಿಗೆ ಲಭ್ಯವಿರುವ ಲಿಂಕ್ ಮೂಲಕ ಮಾತ್ರ ಪಾವತಿಸಬೇಕು. **https://www.iiflonehome.com/**ಗೆ ಭೇಟಿ ನೀಡಬೇಕು.
ಸೂಚನೆ: ಪ್ರತಿ ಆಸ್ತಿ/ಭದ್ರತಾ ಆಸ್ತಿಗೆ ಪಾವತಿ ಲಿಂಕ್ ವಿಭಿನ್ನವಾಗಿದೆ. ನೀವು ಸಾರ್ವಜನಿಕ ಹರಾಜಿನಲ್ಲಿ ಖರೀದಿಸಲು ಉದ್ದೇಶಿಸಿರುವ ಆಸ್ತಿಯ ಲಿಂಕ್ ಅನ್ನು ನೀವು ಬಳಸುತ್ತಿರುವಿರಿ ಎಂದು ಖಚಿತಪಡಿಸಿಕೊಳ್ಳಿ. ಬಾಕಿ ಪಾವತಿಗಾಗಿ - **https://www.iiflonehome.com >My Bid >Pay Balance Amount** ಗೆ ಲಾಗಿನ್ ಮಾಡಿ

ಷರತ್ತು ಮತ್ತು ನಿಬಂಧನೆಗಳು:

1. ಇ-ಹರಾಜಿನಲ್ಲಿ ಭಾಗವಹಿಸುವುದಕ್ಕಾಗಿ ಬಿಡ್‌ದಾರರು ಅವರ ವಿವರಗಳನ್ನು ಸೇವೆ ಒದಗಿಸುವವರ **https://www.iiflonehome.com,**ನಲ್ಲಿ ಲಾಗಿನ ಅಕೌಂಟ್, ಲಾಗಿನ್ ಐಡಿ ರಚಿಸಿಕೊಳ್ಳುವುದಕ್ಕಾಗಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಲು ನೋಂದಾಯಿಸಿಕೊಳ್ಳಬೇಕು. ಇಚ್ಛೆಯುಳ್ಳ ಬಿಡ್‌ದಾರರು ಅವರ ಇಎಂಡಿ ವಿವರಗಳ ಕೆವೈಸಿ ಮತ್ತು ಪ್ಯಾನ್ ಕಾರ್ಡ್ ಪ್ರತಿಗಳನ್ನು ಬಿಟಿಟೆಂಡರ್‌ಫಾರಂಟಿಬಿ ನಮೂನೆಯೊಂದಿಗೆ ಮೇಲೆ ತಿಳಿಸಿದ ಶಾಖಾ ಕಚೇರಿಗೆ ಸಲ್ಲಿಸಬೇಕು.
2. ಬಿಡ್‌ದಾರರು ಅವರ ಆಫರ್‌ಗಳನ್ನು ''ಬಿಡ್ ಹೆಚ್ಚಿಸುವ ಮೊತ್ತ'' ಎಂಬುವ ಕಾಲಂ ತಿಳಿಸಿದ ಗುಣಕದ ಮೊತ್ತದಂತೆ ಸುಧಾರಿಸಬೇಕು. ಬಿಡ್ ಮುಕ್ತಾಯದ ಅವಧಿಯ ಕಡೆಯ 5 ನಿಮಿಷದಲ್ಲಿ ಬಿಡ್ ಬಂದಲ್ಲಿ ಮುಕ್ತಾಯದ ಅವಧಿಯು 5 ನಿಮಿಷಗಳ ಸ್ವಯಂಚಾಲಿತವಾಗಿ ವಿಸ್ತರಿತಗೊಳ್ಳುತ್ತದೆ.
3. ಯಶಸ್ವಿ ಬಿಡ್‌ದಾರರು, ಎಓರವರಿಂದ ಬಿಡ್ ಬೆಲೆಯು ಸ್ವೀಕೃತವಾದ 24 ಗಂಟೆಗಳ ಒಳಗಾಗಿ 25% ರಷ್ಟು ಬಿಡ್ ಮೊತ್ತವನ್ನು (ಇಎಂಡಿ ಹೊಂದಿಸಿದ) ನಂತರ ಮತ್ತು ಉಳಿದ 75%ರಷ್ಟು ಬಿಡ್ ಮೊತ್ತವನ್ನು ಸೆಕ್ಯೂರ್ಡ್ ಕ್ರೆಡಿಟರ್‌ರವರಿಂದ ಮಾರಾಟ ದೃಢೀಕರಣ ಆದ ದಿನಾಂಕದಿಂದ 15 ದಿನಗಳ ಒಳಗಾಗಿ ಪಾವತಿಸಬೇಕು. ಎಲ್ಲಾ ಠೇವಣಿ ಮತ್ತು ಪಾವತಿ ನಿಗದಿತ ಪಾವತಿ ರೀತಿಯಲ್ಲಿರಬೇಕು.
4. ಖರೀದಿದಾರರು ಆಸ್ತಿಗೆ ಸಂಬಂಧಿಸಿದ ಸೆಸ್, ಅನ್ವಯಿಸುವ ಮುದ್ರಾಂಕ ಶುಲ್ಕ, ಫೀಜುಗಳು ಹಾಗೂ ಇನ್ಯಾವುದೇ ಸ್ಥಾನಿಕ ಅಥವಾ ಇತರೆ ಬಾಕಿಗಳಾದ, ಮುನಿಸಿಪಲ್ ತೆರಿಗೆ, ವಿದ್ಯುತ್ ಛಾರ್ಜುಗಳು ಭೂಮಿ ಹಾಗೂ ಔಟ್ ಗೋಯಿಂಗ್‌ಗಳನ್ನು ಸೇರಿದ ಎಲ್ಲಾ ಸಾಂದರ್ಭಿಕ ವೆಚ್ಚಗಳನ್ನು ಪಾವತಿಸಬೇಕು.
5. ಖರೀದಿದಾರರು ವಹಿವಾಟು/ಮಾರಾಟದ ಮೊತ್ತದ ಪಾವತಿಗೆ ಟಿಡಿಎಸ್ ಅರ್ಜಿಯನ್ನು ಪಾವತಿಸಬೇಕು ಮತ್ತು ಐಐಎಫ್‌ಎಲ್ ಎಚ್‌ಎಫ್‌ಎಲ್ ನೊಂದಿಗೆ ಟಿಡಿಎಸ್ ಪ್ರಮಾಣಪತ್ರವನ್ನು ಸಲ್ಲಿಸಬೇಕು.
6. ಬಿಡ್‌ದಾರರುಗಳಿಗೆ ಸಲಹೆ ನೀಡುವುದೇನೆಂದರೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸುವ ಮೊದಲು ವೆಬ್‌ಸೈಟ್ **https://www.iiflonehome.com and https://www.iifl.com/home-loans/properties-for- auction**ನಲ್ಲಿ ಇವುಗಳನ್ನು ಹಾಗೂ ಅರ್ಜಿ ನಮೂನೆಗಳನ್ನು ಇ-ಹರಾಜಿನ ಷರತ್ತು ಮತ್ತು ನಿಬಂಧನೆಗಳಿಗಾಗಿ ಪೂರ್ಣವಾಗಿ ಓದಿ ಮನನ ಮಾಡಿಕೊಳ್ಳಬೇಕು.
7. ಇ-ಹರಾಜಿನ ಬಗ್ಗೆ ವಿವರಗಳಿಗಾಗಿ ಪ್ರಕ್ರಿಯೆ ಮತ್ತು ಆನ್‌ಲೈನ್ ತರಬೇತಿಗಳಿಗಾಗಿ ಸಹಾಯಕ್ಕಾಗಿ ಭಾವಿ ಬಿಡ್‌ದಾರರು ಸೇವಾ ಒದಗಿಸುವವರನ್ನು ಇ ಮೇಲ್ ಐಡಿ:- **care@iiflonehome.com, support** ಸಹಾಯವಾಣಿ ಸಂಖ್ಯೆಗಳು:**@ 1800 2672 499.**
8. ಯಾವುದೇ ಆಸ್ತಿಯ ಸಂಬಂಧಿತ ವಿವರಗಳಿಗಾಗಿ ಆಸ್ತಿಯ ಪರಿಶೀಲನೆ ಮತ್ತು ಆನ್‌ಲೈನ್ ಬಿಡ್ ಇತ್ಯಾದಿ ಗಳಿಗಾಗಿ ಉಚಿತ ಸಂ. ಐಐಎಫ್‌ಎಲ್ ಹೆಚ್‌ಎಫ್‌ಎಲ್ 1800 2672 499ಕ್ಕೆ ಬೆಳಗ್ಗೆ 09:30 ಗಂಟೆಯಿಂದ ಸಂಜೆ 18:00 ಗಂಟೆಯವರೆಗೆ ಸೋಮವಾರದಿಂದ ಶುಕ್ರವಾರದೊಳಗೆ ಕರೆ ಮಾಡಿ ಅಥವಾ **care@iiflonehome.com**ಗೆ ಬರೆದುಕೊಳ್ಳಿರಿ.
9. ಈ ಮೂಲಕ ಸದರಿ ಸಾಲಗಾರರಿಗೆ ತಿಳಿಸುವುದೇನೆಂದರೆ ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಭದ್ರತಾ ಆಸ್ತಿಯಲ್ಲಿ ಬಿದ್ದಿದ್ದ ಗೃಹಉಪಯೋಗಿ ವಸ್ತುಗಳನ್ನು 7 ದಿನಗಳ ಒಳಗಾಗಿ ತೆಗೆದುಕೊಂಡು ಹೋಗಬೇಕು. ಇಲ್ಲವಾದಲ್ಲಿ ಸದರಿ ವಸ್ತುಗಳಿಗೆ ಐಐಎಫ್‌ಎಲ್-ಹೆಚ್‌ಎಫ್‌ಎಲ್ ಯಾವುದೇ ಹಾನಿಗೆ ಜವಾಬ್ದಾರಿಯಾಗುವುದಿಲ್ಲ.
10. ಸಾಲಗಾರರಿಗೆ ಮತ್ತೆ ಸೂಚನೆ ನೀಡುವುದೇನೆಂದರೆ ಸದರಿ ವಸ್ತುಗಳನ್ನು ಭದ್ರತಾ ಆಸ್ತಿಗಳಲ್ಲಿ ಬಿದ್ದಿರುವ ವಸ್ತುಗಳನ್ನು ತೆಗೆದುಕೊಂಡು ಹೋಗದೇ ಇದ್ದಲ್ಲಿ ಕಾನೂನಿನಂತೆ ಮಾರಾಟ ಮಾಡಲಾಗುವುದು.
11. ಯಶಸ್ವಿ ಬಿಡ್‌ದಾರರು ಖರೀದಿದಾರರಿಂದ ಮೇಲೆ ತಿಳಿಸಿದ ಅವಧಿಯೊಳಗಾಗಿ ಒಂದು ಪಕ್ಷ ಯಾವುದೇ ಪಾವತಿಯಲ್ಲಿ ವಿಫಲತೆ ಕಂಡುಬಂದಲ್ಲಿ ಮಾರಾಟವನ್ನು ರದ್ದುಪಡಿಸಲಾಗುವುದು. ಮತ್ತು (ಇಎಂಡಿ ಸೇರಿದಂತೆ) ಈಗಾಗಲೇ ಪಾವತಿ ಮಾಡಿರುವುದನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಆಸ್ತಿಯನ್ನು ಮತ್ತು ಮಾರಾಟಕ್ಕೆ ಇಡಲಾಗುವುದು.
12. ಎಓ ರವರು ಮಾರಾಟದ ಟೆಂಡರ್ ಹರಾಜನ್ನು ಮುಂದಕ್ಕೆ ಹಾಕಬಹುದಾದ ಮತ್ತು ಷರತ್ತು ಹಾಗೂ ನಿಬಂಧನೆ ಬದಲಾಯಿಸಬಹುದಾದ ಹಕ್ಕುಗಳನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಈ ಬಗ್ಗೆ ಎಓ ಐಐಎಫ್‌ಎಲ್-ಹೆಚ್‌ಎಫ್‌ಎಲ್‌ನ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ.

2002ರ ಸರ್ಫೇಸಿ ಕಾಯಿದೆಯ ನಿಯಮ 9 ಉಪ ನಿಯಮ (1)ರ ಅಡಿಯಲ್ಲಿ 15 ದಿನಗಳ ಮಾರಾಟದ ಸೂಚನೆ

ಮೇಲೆ ತಿಳಿಸಿದಂತೆ ಬಾಕಿ ಸಾಲವನ್ನು ಅಪ್ ಟು ಡೇಟ್ ಬಡ್ಡಿ ಹಾಗೂ ಅಸಲಿನಡಿ ವೆಚ್ಚಗಳೊಂದಿಗೆ ಟೆಂಡರ್/ ಹರಾಜಿಗೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಆಸ್ತಿಯನ್ನು ಹರಾಜು ಮಾಡಿ ಸಾಲವನ್ನು ಮಾಡಲಾಗುವುದು. ಇನ್ನೂ ಬಾಕಿ ಉಳಿದರೆ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲಿ ಮಾಡಿಕೊಳ್ಳಲಾಗುವುದು.

ಸ್ಥಳ : ಧಾರವಾಡ, ದಿನಾಂಕ : 27-ಫೆಬ್ರವರಿ-2025
ಸಹಿ/- ಅಧಿಕೃತ ಅಧಿಕಾರಿ, ಐಐಎಫ್‌ಎಲ್ ಹೋಮ್ ಫೈನಾನ್ಸ್ ಲಿಮಿಟೆಡ್

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್ಸಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ-ಸಾಲಗಾರ/ಜಾಮೀನುದಾರ/ ಹೆಸರು	13-2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ ದಿನಾಂಕ 24.02.2025 ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎನ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	45449430000086, 30319680000018, 45449680000082	1) ಶ್ರೀ ಮೋಹಿನ್‌ಸಾಬ್ ಎನ್ ಕಿತ್ತೂರ್, ಅಲ್ಲದೇ: ಮೆ|| ಮೋಹಿನ್‌ಸಾಬ್ ಎನ್ ಕಿತ್ತೂರ್, 2) ಶ್ರೀಮತಿ ಮಲನ್ ಎನ್ ಕಿತ್ತೂರು, ಅಲ್ಲದೇ: ಮೆ|| ಜೆಕೆ ಆಟೋ ಮೊಬೈಲ್ಸ್ ಸರ್ವೀಸ್	07.11. 2023	09.01. 2024	ರೂ. 13,00,316.56 (ಹದಿಮೂರು ಲಕ್ಷದ ಮುನ್ನೂರ ಹದಿನಾರು ರೂ. ಮತ್ತು ಐವತ್ತಾರು ಪೈಸೆ ಮಾತ್ರ)	19.03.2025 Time: 09:30 AM to 05:00 PM	ರೂ. 12,45,000/- (ಹನ್ನೆರಡು ಲಕ್ಷದ ನಲವತ್ತೈದು ಸಾವಿರ ರೂ. ಮಾತ್ರ)	ರೂ. 1,24,500/- (ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಐದುನೂರು ರೂ. ಗಳು ಮಾತ್ರ)	02.04.2025 @ 02:00 PM	01.04.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದಿ ಫೇರ್‌ವೇ, ನೆಲಮಹಡಿ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.

ಭದ್ರತಾ ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದಂತೆ ಸ್ಥಿರ ಆಸ್ತಿಯ ಪ್ಲಾಟ್ ಆಸ್ತಿ, ದಕ್ಷಿಣ ಭಾಗಕ್ಕೆ ಸಂಬಂಧಿಸಿದಂತೆ (400 ಚದರ ಅಡಿ,) ಪಶ್ಚಿಮ ಭಾಗದ ವಿಸ್ತೀರ್ಣ 88 ಚ.ಗಜ ಅಳತೆಯ ಸಂಪೂರ್ಣ CTS No..2265B/2 ರಲ್ಲಿ , ಅಳತೆ 176.2/9 ಚ.ಗಜ ಮತ್ತು ಒಂದು ಆರ್‌ಸಿಸಿ ಕಟ್ಟಡ, ಸೇರಿದಂತೆ, ಬಂಗಾರಪೇಟೆ, ಮುನಿಸಿಪಲ್ ವಾರ್ಡ್ ಸಂ.5, ತಾಲ್ಲೂಕು ಹುಬ್ಬಳ್ಳಿ ,ಜಿಲ್ಲೆ: ಧಾರವಾಡ, ಎಚ್‌ಡಿಎಂಸಿ ಹುಬ್ಬಳ್ಳಿ ಮತ್ತು ಉಪ- ನೋಂದಣಾಧಿಕಾರಿ, ಹುಬ್ಬಳ್ಳಿ ವ್ಯಾಪ್ತಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸಿಟಿಎಸ್ ನಂ.2265ಬಿ/2 ರಿಯಾಜ್ ಅಹಮದ್ ಕಿತ್ತೂರರವರ ಆಸ್ತಿ, ಪಶ್ಚಿಮಕ್ಕೆ: ನಜರೆರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಇದೇ ಸಿಟಿಎಸ್ ನಂ.2265ಬಿ/2ರ ರಿಯಾಜ್ ಅಹಮದ್ ಕಿತ್ತೂರುರವರ ಆಸ್ತಿ, ದಕ್ಷಿಣಕ್ಕೆ: ರಸ್ತೆ.

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ||-4 ಕ್ಲೋಸರ್ ಮೂಲಕ **https://bankauctions.in & www.foreclosureindia.com.** ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ||-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. **8142000809. Email id: info@bankauctions.in / srinivas@bankauctions.in.** ಇವರನ್ನು ಸಂಪರ್ಕಿಸುವುದು. ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 6362951653), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸಾಯಿದಾ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 27.02.2025, ಸ್ಥಳ: ಧಾರವಾಡ
ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್